**ಕರ್ನಾಟಕ ಸರ್ಕಾರ**

**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ**<br>**(ಆರ್.ಪಿ.ಸಂಖ್ಯೆ 57)**<br>**ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,**

**ಹಾಸನ**

**ಸ್ಪೆಷಲ್ ಕೇಸ್ ನಂಬರ್ ಃ 92/2011**

ಪ್ರಾಸಾ- 22 ಚಾಸಾ- 31

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಕೇಶವ ರೆಡ್ಡಿ ಎಸ್ ವಿ |
| ತಂದೆಯ ಹೆಸರುಃ | ಃ | ಸಂಜೀವ ರೆಡ್ಡಿ |
| ವಯಸ್ಸುಃ | ಃ | 66 ವರ್ಷ |
| ಉದ್ಯೋಗಃ | ಃ | ನಿವೃತ್ತ ಉಪಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ |
| ವಾಸಃ | ಃ | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 30-08-2024**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 21.08.2008 ರಿಂದ 30.06.2011 ರವರೆಗೆ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸಹಾಯಕ ಆಯುಕ್ತನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2.ಜಯಲಕ್ಷ್ಮಿ ಫ್ಯಾನ್ಸಿ ಸೆಂಟರ್ ಚನ್ನರಾಯಪಟ್ಟಣ ಅದರ ಸರಕುಗಳ ಮೌಲ್ಯಮಾಪನ ಮಾಡಿ ಕಳುಹಿಸಲು ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸರಿಂದ ಪತ್ರ ಬಂದಿತ್ತು. ಆ ಪ್ರಕಾರ ನಾನು ಅಲ್ಲಿಗೆ ಭೇಟಿ ನೀಡಿ ಸರಕುಗಳ ಮೌಲ್ಯಮಾಪನ ಮಾಡಿದೆ. ಸರಕುಗಳ ಒಟ್ಟು ಮೌಲ್ಯಮಾಪನ 99,472 ರೂಪಾಯಿ ಆಗಿತ್ತು. ಅದೇ ಪ್ರಕಾರ ವರದಿಯನ್ನು ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸರಿಗೆ ನೀಡಿದ್ದೇನೆ. ನಾನು ನೀಡಿದ ವರದಿಯೊಂದಿಗಿನ ಪತ್ರ ನೋಡಿ ಗುರುತಿಸಿದ್ದೇನೆ. ಅದನ್ನು ನಿಪಿ-60 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-60(ಎ) ಎಂದು

ಗುರುತಿಸಲಾಯಿತು. ನಾನು ನೀಡಿರುವ ಮೌಲ್ಯಮಾಪನಾ ವರದಿ 8 ಪುಟಗಳಿದ್ದು ಅದನ್ನು ನಿಪಿ-61 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-61(ಎ) ಎಂದು ಗುರುತಿಸಲಾಯಿತು. ಈ ವಿಚಾರವಾಗಿ ಲೋಕಾಯುಕ್ತ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

**<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಬಿ.ಜೆ.ಪಿ.ಎಸ್. ವಕೀಲರಿಂದಃ-</u>**

ಜಯಲಕ್ಷ್ಮಿ ಫ್ಯಾನ್ಸಿ ಸೆಂಟರ್ ನ ಮಾಲೀಕರು ಮಂಜುನಾಥ್ ಆಗಿದ್ದು ಅವರು ಲೈಸೆನ್ಸ್ ಹೋಲ್ಡರ್ ಆಗಿದ್ದರು. ನಿಪಿ-61 ಕ್ಕೆ (ಮೌಲ್ಯಮಾಪನಾ ವರದಿ) ಮಂಜುನಾಥ್ ರವರ ಸಹಿ ಪಡೆದಿದ್ದೇನೆ. ಜಯಲಕ್ಷ್ಮಿ ಫ್ಯಾನ್ಸಿ ಸೆಂಟರ್ ನಲ್ಲಿ ಇದ್ದ ದಾಖಲಾತಿಯಾದ ಘೋಷಣೆ ಪತ್ರಕ್ಕೆ ಮಂಜುನಾಥ್ ರವರು ಸಹಿ ಮಾಡಿದ್ದರು ಎಂದರೆ ಸರಿ.

**<u>ಮರು ವಿಚಾರಣೆಃ</u>** ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**
**ಸ್ಪೆಷಲ್ ನ್ಯಾಯಾಧೀಶರು, ಹಾಸನ.**